ಅ) ಮನವಿಗಳು ಬಂದಿಲ್ಲ.

ಆ) ಬೈಲಹೊಂಗಲದಲ್ಲಿ 1993-94ನೇ ಸಾಲಿನಲ್ಲಿ ಹೊಸದಾಗಿ ಪರತಂತ್ರ ಜೀವಿ ಪ್ರಯೋಗ ಶಾಲೆ ಕಟ್ಟಡ ಕಟ್ಟಲು ಅನುದಾನ ಬಿಡುಗಡೆ ಮಾಡುವ ಬಗ್ಗೆ ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ.

ಇ) - ನಿಜ -

ಈ) ಭೂ ಸೇನಾ ನಿಗಮದವರು 93-94ನೇ ಸಾಲಿನಲ್ಲಿ ತಯಾರಿಸಿರುವ ಅಂದಾಜಿನಂತೆ ಈ ಕಾಮಗಾರಿಗೆ 12.50 ಲಕ್ಷ ರೂ. ಗಳಾಗುತ್ತದೆ.

ಉ) ಈ ಬಗ್ಗೆ ಪರಿಶೀಲಿಸಲಾಗುವುದು.

ಕೊಡಗು ಜಿಲ್ಲಾ ಪರಿಷತ್ತಿನ ಅಭಿವೃದ್ಧಿ ಕಾರ್ಯಗಳ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಹಣ

601 - ಶ್ರೀಮತಿ ಸುಮಾ ವಸಂತ (ವಿರಾಜಪೇಟೆ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1992-93, 1993-94ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನ ಇಂಜಿನಿಯರಿಂಗ್ ವಿಭಾಗಕ್ಕೆ ಮಂಜೂರಾದ ಹಣವೆಷ್ಟು?

ಆ) ಈ ಪೈಕಿ ಪ್ರತಿ ವರ್ಷ 3 ತಾಲ್ಲೂಕುಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಇ) ಸರಿಯಾಗಿ ಕಂಟ್ರಾಕ್ಟರ್ದಾರರಿಗೆ ಹಣ ಬಿಡುಗಡೆಯಾಗದೆ ಕಾಮಗಾರಿ ಅರ್ಧದಲ್ಲಿ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು): ಅ) ಕೊಡಗು ಜಿಲ್ಲಾ ಪಂಚಾಯತಿಯ ಇಂಜಿನಿಯರಿಂಗ್ ವಿಭಾಗಕ್ಕೆ ಜಿಲ್ಲಾ ಪಂಚಾಯತಿಯಿಂದ ಮಂಜೂರಾದ ಹಣದ ವಿವರ ಹೀಗಿದೆ.

(ರೂ. ಲಕ್ಷಗಳಲ್ಲಿ)

	1992-93	1993-94
ಯೋಜನೆ	454.66	555.45
ಯೋಜನೇತರ	117.35	113.92
ಒಟ್ಟು ರೂ.	**572.01**	**669.37**

ಆ. ಸರ್ಕಾರದಿಂದ ಜಿಲ್ಲಾ ಪಂಚಾಯತಿಗೆ ತಾಲ್ಲೂಕುವಾರು ಹಣ ಬಿಡುಗಡೆ ಮಾಡುವ ಕ್ರಮವಿರುವುದಿಲ್ಲ. ಬಿಡುಗಡೆ ಮಾಡಿದ ಅನುದಾನಗಳ ವಿವರಗಳು ಹೀಗಿವೆ.

(ರೂ. ಲಕ್ಷಗಳಲ್ಲಿ)

	1992-93	1993-94
ಯೋಜನೆ	438.96	422.85
ಯೋಜನೇತರ	117.33	80.78
ಒಟ್ಟು ರೂ.	**556.29**	**503.63**

ಇ. ಇಲ್ಲ

ಈ. ಉದ್ಭವಿಸುವುದಿಲ್ಲ.

ಕಂಟ್ರಾಕ್ಟ್ ಕೆಲಸಗಳನ್ನು ವ್ಯವಸಾಯ ಕೂಲಿಗಾರರಿಗೆ ನೀಡುವ ಬಗ್ಗೆ

591 - ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂಟ್ರಾಕ್ಟ್ ಕೆಲಸಗಳನ್ನು ವ್ಯವಸಾಯ ಕೂಲಿಗಾರರಿಗೆ ನೀಡಲು ಸರ್ಕಾರವು ಪರಿಗಣಿಸುವುದೇ?

ಆ) ರಾಜ್ಯದಲ್ಲಿ ಕೂಲಿಗಾರರ ಸಹಕಾರ ಸಂಘಗಳಿರುವುದು ವಾಸ್ತವಾಂಶವಲ್ಲವೇ?

ಇ) ಅವುಗಳು ಸ್ಥಗಿತಗೊಂಡಿರುವುದಕ್ಕೆ ಕಾರಣಗಳೇನು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಸರ್ಕಾರವು ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಂಡಾಗ ಸ್ಥಳೀಯ ಕಾರ್ಮಿಕರು ಉದ್ಯೋಗಾವಕಾಶ ಪಡೆಯುವರು.

ಆ) ಹೌದು.

ಇ) ಸಮರ್ಥ ನಾಯಕತ್ವದ ಅಭಾವ, ಅಸಮರ್ಥ ನಿರ್ವಹಣೆ ಮತ್ತು ಸದಸ್ಯರಲ್ಲಿ ಆಂತರಿಕ ಬಿಕ್ಕಟ್ಟು ಇತ್ಯಾದಿ.

ಮೂರ್ತೆದಾರರ ಸೊಸೈಟಿಗಳ ಸಂಖ್ಯೆ

553 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮೂರ್ತೆದಾರರ ಸೊಸೈಟಿಗಳಿವೆ?

ಆ) ಇನ್ನೆಷ್ಟು ಸಹಕಾರಿ ಸಂಘಗಳು ನೋಂದಾವಣೆಗೆ ಅರ್ಜಿ ಸಲ್ಲಿಸಿವೆ?

ಇ) ಅವುಗಳನ್ನು ಯಾವಾಗ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) 35

ಆ) 19

ಇ) ಅಬಕಾರಿ ಇಲಾಖೆಯಿಂದ ಅನುಮತಿ ದೊರೆತ ತಕ್ಷಣ.

ರೈತರು ಪಡೆದು ಕೊಂಡಿರುವ ಸಹಕಾರಿ ಸಾಲದ ಮೇಲಿನ ಬಡ್ಡಿ ಮನ್ನಾ

557 - ಶ್ರೀ ಗುರುಪಾದಪ್ಪ ನಾಗಮಾರಹಳ್ಳಿ (ಔರಾದ್): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ವಿವಿಧ ಸಹಕಾರ ಸಂಘಗಳಿಂದ ಹಾಗೂ ಸಹಕಾರಿ ಬ್ಯಾಂಕುಗಳಿಂದ ರೈತರು ಪಡೆದುಕೊಂಡಿರುವ ಸಾಲದ ಮೊತ್ತವೆಷ್ಟು?

ಆ) ಎಷ್ಟು ವರ್ಷಗಳಿಂದ ಈ ಸಾಲದ ಮರುಪಾವತಿಯಾಗಿಲ್ಲ ಹಾಗೂ ಇದಕ್ಕೆ ಸೇರಿರುವ ಬಡ್ಡಿಯ ಮೊತ್ತವೆಷ್ಟು?

ಇ) ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ರೈತರು ಅತಿವೃಷ್ಟಿ ಅನಾವೃಷ್ಟಿ ಹಾಗೂ ಭೂಕಂಪದಂತಹ ನೈಸರ್ಗಿಕ ದುರಂತಗಳನ್ನು ಎದುರಿಸುತ್ತಿರುವುದರಿಂದ ಸರ್ಕಾರವು ಕಡೇ ಪಕ್ಷ ಸಹಕಾರಿ ಸಾಲದ ಮೇಲೆ ಬಡ್ಡಿಯನ್ನಾದರೂ ಮನ್ನಾಮಾಡುವುದೇ?

ಈ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):